# ಭೂತನಾಥ

ಬೆಂಗಳೂರಿನ ನಿವಾಸಿಗಳಾದ ಲೇಖಕರು ಶಿವರಾತ್ರಿಯ ಸಂದರ್ಭದಲ್ಲಿ ಶಿವನ ಒಂದು ಹೆಸರನ್ನು ಕುರಿತು ವಿಚಾರ ಮಾಡಿದ್ದಾರೆ. ನಾಮಸ್ಮರಣೆಗೆ ಭಾವನಾತ್ಮಕ ಹಾಗೂ ಬೌದ್ಧಿಕ ಬೆಂಬಲವಿದ್ದರೆ ಅದು ಹೆಚ್ಚು ಫಲಕಾರಿಯಾಗುತ್ತದೆ ಎಂಬುದು ಈ ಲೇಖನದ ತಾತ್ಪರ್ಯ.

ಪ್ರೊ. ಎಂ. ಆರ್. ನಾಗರಾಜು

ಈಶ್ವರನ ಅನೇಕ ಹೆಸರುಗಳ ಪೈಕಿ 'ಭೂತನಾಥ' ಎಂಬ ಹೆಸರು ಅಪರೂಪವಾಗಿ ಬಳಕೆಯಾಗುವಂತಹುದು. ಆದಾಗ್ಯೂ ಬಹಳ ಅರ್ಥಪೂರ್ಣವಾದದ್ದು. ದೇವತೆಗಳ ಹೆಸರುಗಳು ಅಂಕಿತನಾಮವೂ ಹೌದು, ಅನ್ವರ್ಥನಾಮವೂ ಹೌದು ಎಂಬಂಶವನ್ನು ನಾವು ಮರೆಯುವಂತಿಲ್ಲ. ಈ ಅಂಶವನ್ನು ತಿಳಿಸಲು 'ಭೂತನಾಥ' ಎಂಬ ಹೆಸರು ಏನನ್ನು ಸೂಚಿಸುತ್ತದೆ ಎಂದು ಈ ಲೇಖನದಲ್ಲಿ ವಿಚಾರ ಮಾಡಲಾಗಿದೆ.

'ಭೂತ' ಎಂದರೆ ಈಗಾಗಲೇ ಉಂಟಾದದ್ದು ಎಂದರ್ಥ (ಭೂ – ಉಂಟಾಗು, ಸಂಭವಿಸು). ಆದರೆ ಈ ಅರ್ಥವಲ್ಲದೆ ಇನ್ನೂ ಅನೇಕ ಅರ್ಥಗಳನ್ನು ಈ ಪದ ಒಳಗೊಳ್ಳಬಲ್ಲದು.

'ಪಂಚಭೂತ' ಎನ್ನುವಾಗ **ಭೂಮ್ಯಾಪಸ್ತೇಜೋವಾಯುರಾಕಾಶಾಃ**—ಭೂಮಿ, ನೀರು, ಬೆಂಕಿ, ಗಾಳಿ ಹಾಗೂ ಆಕಾಶ ಎಂದು ಹೇಳಲಾಗುತ್ತದೆ. ಅನುಕ್ರಮವಾಗಿ ಘನ, ದ್ರವ, ಶಕ್ತಿ, ಗಾಳಿ ಹಾಗೂ ಆಕಾಶಗಳನ್ನು ಈ ಹೆಸರುಗಳು ಪ್ರತಿನಿಧಿಸುತ್ತವೆ. ಜಗತ್ತಿನಲ್ಲಿ ಇರುವ ದ್ರವ್ಯಶಕ್ತಿಗಳೆಲ್ಲವೂ ಈ ಐದು ರೂಪಗಳಲ್ಲೆ ಕಾಣಿಸಿಕೊಳ್ಳಬೇಕು ತಾನೆ? ಈ ಐದು ರೂಪಗಳ ಒಡೆಯನೇ ಭೂತನಾಥ. ಮನುಷ್ಯ ಇಂದ್ರಿಯಗಳಿಗೆ ಅಧೀನನಾಗಿ ಜೀವಿಸುತ್ತಾನೆ. ಹೊರಗಿನ ವಸ್ತುಗಳಿಂದ ಆಕರ್ಷಿತನಾಗಿ ತನ್ನ ಆತ್ಮದ ಕುರಿತು ಮರೆಯುತ್ತಾನೆ, ಸೃಷ್ಟಿಕರ್ತನನ್ನೂ ಮರೆಯುತ್ತಾನೆ. ಆದರೆ ಈ ಎಲ್ಲ ಸೃಷ್ಟಿಯ ನಿಯಾಮಕನೂ, ಇದನ್ನು ಮೀರಿ ನಿಂತವನೂ ಆದ ಈಶ್ವರನಲ್ಲಿ ಇಂತಹ ಅಜ್ಞಾನವಿಲ್ಲ. ಜಗತ್ತಿನ, ಇಂದ್ರಿಯಗೋಚರ ದ್ರವ್ಯವಾವುದೂ ಆತನನ್ನು ವಿಚಲಿತಗೊಳಿಸದು.

'ಭೂತ' ಎಂಬ ಪದಕ್ಕೆ ಜೀವ ಎಂಬರ್ಥವೂ ಇದೆ. 'ಸರ್ವಭೂತಹಿತೇ ರತಾಃ' ಎಂಬ ಮಾತು ಭಗವದ್ಗೀತೆಯಲ್ಲಿ ಬರುತ್ತದೆ. ಸಕಲ ಜೀವರಿಗೂ ಮಂಗಳವನ್ನು ಉಂಟುಮಾಡುವವರು ಎಂದೇ ಇಲ್ಲಿ ಅರ್ಥೈಸಬೇಕಾಗುತ್ತದೆ. ದೈವಸೃಷ್ಟಿಯಿಂದ, 'ಪಂಚಭೂತಗಳ' ಜೋಡಣೆಯಿಂದ ಉಂಟಾದದ್ದೇ ಜೀವ ಅರ್ಥಾತ್ 'ಭೂತ'. ಈಗಾಗಲೇ ಸೃಷ್ಟಿಯಾಗಿ ಇರುವಂತಹ ವಸ್ತು, ಪದಾರ್ಥ ಅಥವಾ ಪ್ರಾಣಿ. ಅಂದರೆ 'ಭೂತನಾಥ' ಪದಕ್ಕೆ ಇನ್ನೊಂದು ಆಯಾಮವೂ ಬಂದಿತು. ಯಾವುದೇ ತಾರತಮ್ಯವಿಲ್ಲದೆ ಎಲ್ಲರನ್ನೂ ಸಮನಾಗಿ ಕಾಪಾಡುವವನು. ಎಲ್ಲವನ್ನೂ ನಿಯಂತ್ರಿಸುವವನು, ಕರ್ಮಫಲಗಳನ್ನು ವಿತರಿಸಿ ಜೀವಿಗಳ ಗತಿಯನ್ನು ತೀರ್ಮಾನಿಸುವವನು ಎಂದರ್ಥ.



ಮುರುಡೇಶ್ವರದಲ್ಲಿರುವ ಶಿವನ ಬೃಹತ್ ವಿಗ್ರಹ

'ಭೂತ' ಎಂಬ ಪದಕ್ಕೆ ಗತಕಾಲ (past) ಎಂಬರ್ಥವೂ ಇದೆ. ನಮ್ಮೆಲ್ಲ ಹಿಂದಿನ ಅನುಭವಗಳ ಮೊತ್ತ ಇದು. 'ಭವ'ವನ್ನು ಅನುಸರಿಸಿ ಬಂದದ್ದು 'ಅನುಭವ'. ನಮಗೆ ಈಗಾಗಲೇ ಆದ ಅನುಭವಗಳು ನಮ್ಮಲ್ಲಿ ನೆನಪಾಗಿ ಉಳಿದುಕೊಂಡಿರುತ್ತವೆ. ಅದೂ 'ಭೂತ'ವೇ! ನಮ್ಮೆಲ್ಲ ವ್ಯಥೆಗಳೂ ಉಂಟಾಗುವುದು ಈಗಾಗಲೇ ಆಗಿಹೋದ, ಹೀಗೆ ಆಗುವುದಿಲ್ಲ, ಆಗಕೂಡದು ಎಂದು ಭಾವಿಸಿದ್ದ ಘಟನೆಗಳ ಬಗ್ಗೆ. ಹಳೆಯ

ನೆನಪುಗಳು ತನ್ನನ್ನು ಆಳುವುದಕ್ಕೆ, ಅಳಿಸುವುದಕ್ಕೆ, ಮುಳುಗಿಸುವುದಕ್ಕೆ ಅನುವು ಮಾಡಿಕೊಡದವನೇ ಭೂತವನ್ನು ಗೆದ್ದವನು. ಅವನೇ ಭೂತನಾಥ. ಏಕೆಂದರೆ ಭೂತಕಾಲವನ್ನು ಗೆದ್ದರೆ ಶೋಕವನ್ನು ಗೆದ್ದಂತೆಯೇ. ಚಿಂತೆ, ದುಗುಡಗಳು ಹಿಂದಿನ ಅನುಭವಗಳಿಂದ ಮತ್ತು ಮುಂದಿನ ಬಯಕೆಗಳಿಂದ ಮಾತ್ರ ಉಂಟಾಗುವುವು. ವರ್ತಮಾನ ಕಾಲವನ್ನು ನಿರ್ಣಯಿಸುವ ಈ ನೆನಪುಗಳು ಮತ್ತು ಬಯಕೆಗಳು ಮನುಷ್ಯನನ್ನು ವಿಚಲಿತಗೊಳಿಸುತ್ತವೆ. ಭೂತನಾಥನನ್ನು ಕುರಿತು ಭಾವಿಸುವುದೆಂದರೆ ವರ್ತಮಾನದ ಕ್ಷಣದಲ್ಲಿ (Now and Here) ನೆಲೆನಿಲ್ಲುವುದು.

ಭೂತವೆಂದರೆ ತೀರಿಕೊಂಡ ವ್ಯಕ್ತಿಯು ತನ್ನ ಸೂಕ್ಷ್ಮ ಶರೀರದಿಂದ ಕಾಣಿಸಿಕೊಳ್ಳುವ ಪರಿ ಎನ್ನುವ ಒಂದು ಅರ್ಥವೂ ಇದೆ. ಸ್ಮಶಾನವಾಸಿಯಾದ ಶಿವನು ತನ್ನದೇ ಸ್ಮಶಾನದಲ್ಲಿರುವ ಭೂತಪ್ರೇತಗಳಿಗೆ ಹೆದರುವುದು ಸಾಧ್ಯವೇ? ಭೂತಗಣಗಳ ಅಧಿಪತಿಯಾದ ಶಿವನು (ಭೂತನಾಥನು) ಜೀವಿಗಳಿಗೆ ಮುಕ್ತಿಯನ್ನು ಕರುಣಿಸುವವನು. ಭೂತನಾಥನ ಕರುಣೆಯಿಂದ ಯಾವ ಭೂತಪ್ರೇತಗಳೂ ನಮ್ಮನ್ನು ಕಾಡಲಾರವು. ಶ್ರೀರಾಮಕೃಷ್ಣರು ಕಾಶಿಗೆ ಭೇಟಿ ನೀಡಿದ್ದಾಗ ಅಲ್ಲಿ ಸತ್ತವರ ಕಿವಿಗಳಲ್ಲಿ ಶಿವನು ತಾರಕಮಂತ್ರವನ್ನು ಉಚ್ಚರಿಸಿ, ಮುಕ್ತರನ್ನಾಗಿಸುತ್ತಿದ್ದುದನ್ನು ಕಂಡರು.

ಭೂತನಾಥನಾಗುವುದು ಹೇಗೆ? ಭೂತನಾಥನಾಗ ಬಯಸುವ ವ್ಯಕ್ತಿ 'ಸ್ವಯಂಭು' ಆಗಬೇಕು. ಶಿವನಿಗೆ 'ಸ್ವಯಂಭು' ಎಂಬ ಇನ್ನೊಂದು ಹೆಸರಿದೆ. ತನ್ನಿಂದ ತಾನೇ ಉಂಟಾದವನು, ಅಪ್ರಾಕೃತನು ಎಂದರ್ಥ. ಸೃಷ್ಟಿಯಲ್ಲಿರುವ ಎಲ್ಲ ಜೀವಿಗಳಿಗೂ ಆದಿ ಅಂತ್ಯಗಳಿವೆ. ಈಶ್ವರನಿಗೆ ಆದಿಯಿಲ್ಲ. ಅವನೇ ಎಲ್ಲದಕ್ಕೂ ಕಾರಣನಾದ್ದರಿಂದ ಅವನು ಅನಾದಿ, ಸ್ವಯಂಭು. ತನ್ನಲ್ಲೇ ತೃಪ್ತನಾಗಿರುವುದರಿಂದ, ಬೇರೆ ಯಾವುದನ್ನೂ ತನ್ನ ಅಸ್ತಿತ್ವಕ್ಕಾಗಿ ಅವಲಂಬಿಸಿಲ್ಲವಾದ್ದರಿಂದ ಆತ್ಮತೃಪ್ತನು. ತನ್ನ ಒಡೆಯ ಅವನೇ ಆದ್ದರಿಂದ ಸ್ವಯಂಭು. ಮನುಷ್ಯರಲ್ಲಿ ಪ್ರತ್ಯೇಕತೆಯನ್ನು ಉಂಟುಮಾಡುವ ಅಹಮಿಕೆ ಹಾಗೂ ಸ್ವಾರ್ಥ ಭಾವನೆಗಳನ್ನು ಗೆದ್ದವನು, ಭೂತನಾಥ. ಭಗವದ್ಗೀತೆಯಲ್ಲಿ ಸ್ಥಿತಪ್ರಜ್ಞನ ಲಕ್ಷಣವನ್ನು ವಿವರಿಸುವ ಮೊದಲನೇ ಶ್ಲೋಕ ಇದನ್ನೇ ಹೇಳುತ್ತದೆ: **ಪ್ರಜಹಾತಿ ಯದಾ ಕಾಮಾನ್ ಸರ್ವಾನ್ ಪಾರ್ಥ ಮನೋಗತಾನ್**—ಮನಸ್ಸಿನಲ್ಲಿ ಉಂಟಾಗುವ ಎಲ್ಲ ಕಾಮನೆಗಳನ್ನು ತಿರಸ್ಕರಿಸುವವನು, ಸಂಪೂರ್ಣವಾಗಿ ತನ್ನಲ್ಲಿಯೇ ಸಂತೃಪ್ತಿ ಕಂಡುಕೊಂಡವನೇ ಸ್ಥಿತಪ್ರಜ್ಞ. ಇಂದ್ರಿಯಗಳು ಹಾಗೂ ಮನಸ್ಸನ್ನು ಗೆದ್ದವನು, ಭೂತನಾಥನಾಗಬಲ್ಲವನು ಮಾತ್ರ ಹೀಗೆ ಸದಾ ಮುಗುಳ್ನಗಬಲ್ಲ. ಸದಾ ಆನಂದದಲ್ಲಿ ಮುಳುಗಿರುವ ವ್ಯಕ್ತಿ ಎಂದರೆ ಅವನೇ. ಯಾವುದೇ ಬಾಹ್ಯ ಪ್ರಚೋದನೆಯಿಂದ ಅವನು ಆನಂದವನ್ನು ಹೊಂದುವುದಿಲ್ಲ. ತನ್ನಲ್ಲಿಯೇ ಇರುವ ಸಚ್ಚಿದಾನಂದದಲ್ಲಿ ಅವನು ವಿಹರಿಸುತ್ತಿರುತ್ತಾನೆ.

ದೇವತೆಗಳು ನಮ್ಮ ಪೂರ್ವಿಕರ ಮುಗ್ಧ ಕಲ್ಪನೆಗಳಲ್ಲ. ದೇವರ ಹೆಸರುಗಳನ್ನು ಕುರಿತು ಧ್ಯಾನಿಸಿದರೆ ಬದುಕಿಗೆ ಕಾಲಾತೀತವಾದ ಆಯಾಮವನ್ನು ತೋರಿಸಿಕೊಡುವ ಆದರ್ಶಗಳು ಅವುಗಳಲ್ಲಿ ಇವೆ. ಯಾಂತ್ರಿಕವಾಗಿ ನಾಮಸ್ಮರಣೆಯನ್ನು ಮಾಡದೆ ಜೊತೆಜೊತೆಗೆ ಶಬ್ದದ ಅರ್ಥವನ್ನು ಆಳವಾಗಿ ಗ್ರಹಿಸಿದರೆ 'ಪದ'ವೂ ಕೊನೆಗೆ ನಮ್ಮನ್ನು 'ಪರಮಪದ'ಕ್ಕೆ ಒಯ್ಯಬಲ್ಲದು, wordನ ಆಳಕ್ಕಿಳಿಯುವ ಮೂಲಕ world ಅನ್ನು ಪರಿಭಾವಿಸುವ ಹಾಗೆ.

---

## ಬೇಕಾದ್ದು ಕೊಟ್ಟ!

ಬೇಡಿದೆನು ದೇವರಿಗೆ
ಶಕ್ತಿ ಕೊಡು ಎಂದು ॥
ಕೊಟ್ಟುಬಿಟ್ಟನು ನನಗೆ
ಸಹನೆ ಗುಣವಂದು ॥ ೧ ॥

ಬೇಡಿದೆನು ಶಿರಬಾಗಿ
ವಿವೇಕ ಕೊಡು ಬೇಗ ॥
ಕೊಟ್ಟ ಮೇಲಿಂದ್ಮೇಲೆ
ಅನುಭವಗಳಾಗ ॥ ೨ ॥

ಪ್ರೀತಿಯನು ಕೊಡು ಎಂದು
ಬೇಡಿದೆನು ಅವಗೆ ॥
ದುಃಖಿಗಳ ಸೇವೆಯನು
ನೀಡಿದನು ನನಗೆ ॥ ೩ ॥

ವರದಾನ ನೀಡೆಂದು
ಬೇಡಿದೆನು ನಾನು ॥
ದುಡಿಯಲಿಕೆ ಅವಕಾಶ
ಒದಗಿಸಿದನವನು ॥ ೪ ॥

ಧೈರ್ಯವನು ಕೇಳಿದೆನು
ಭಯ ಭಕ್ತಿಯಿಂದ ॥
ತೊಂದರೆಯ ಕೊಡುಕೊಡುತ
ಮೇಲೇಳು ಎಂದ ॥ ೫ ॥

ಬೇಡಿದೆನು ಆರೋಗ್ಯ
ಭಾಗ್ಯವನು ಅಂದು ॥
ನೀಡಿದನು ಯೋಗವನು
ರೂಢಿ ಮಾಡೆಂದು ॥ ೬ ॥

ಬೇಡಿದ್ದು ಕೊಡಲಿಲ್ಲ
ಅವಗೆಲ್ಲ ಗೊತ್ತು ॥
ಬೇಕಾದ್ದು ಕೊಟ್ಟನವ
ಬಯಲಾತು ಕುತ್ತು ॥ ೭ ॥

—'ಕಾಶ', ಬೆಂಗಳೂರು